## ಮಾಹಿತಿ ಹಕ್ಕು (ಶುಲ್ಕ ಮತ್ತು ಖರ್ಚು ನಿಯಂತ್ರಣ) ನಿಯಮಗಳು, 2005

## ವಿಷಯಾನುಕ್ರಮಣಿಕೆ

ನಿಯಮ

1. **ಚಿಕ್ಕ ಹೆಸರು ಮತ್ತು ಪ್ರಾರಂಭ**

2. **ಪರಿಭಾಷೆಗಳು**

## ಮಾಹಿತಿ ಹಕ್ಕು (ಶುಲ್ಕ ಮತ್ತು ಖರ್ಚು ನಿಯಂತ್ರಣ) ನಿಯಮಗಳು, 2005

ಎಫ್‌ಸಂ. 34012 / 8 (ಎಸ್) 2005, ಇಎಸ್‌ಟಿಟಿ (ಬಿ), ದಿನಾಂಕ 16.9.2005, ಭಾರತ ಸರ್ಕಾರ (ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ನಿವೃತ್ತಿ ವೇತನಗಳ ಮಂತ್ರಾಲಯ (ಸಿಬ್ಬಂದಿ ಮತ್ತು ತರಬೇತಿ ಇಲಾಖೆ)

ಮಾಹಿತಿ ಹಕ್ಕು ಅಧಿನಿಯಮ, 2005 (2005ರ 22)ರ 27ನೇ ಪ್ರಕರಣದ (2)ನೇ ಉಪ ಪ್ರಕರಣದ (ಬಿ) ಮತ್ತು (ಸಿ) ಖಂಡಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು ಮಾಹಿತಿ ಹಕ್ಕು (ಶುಲ್ಕ ಮತ್ತು ಖರ್ಚು ನಿಯಂತ್ರಣ) ನಿಯಮಗಳು, 2005 ಎಂದು ಕರೆಯತಕ್ಕದ್ದು.

(2) ರಾಜಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಅವು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**–ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:–

(ಎ) ‘ಅಧಿನಿಯಮ’ ಎಂದರೆ ಮಾಹಿತಿ ಹಕ್ಕು ಅಧಿನಿಯಮ, 2005;
(ಬಿ) ‘ಪ್ರಕರಣ’ ಎಂದರೆ ಆ ಅಧಿನಿಯಮದ ಪ್ರಕರಣ;
(ಸಿ) ಇದರಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಅಧಿನಿಯಮದಲ್ಲಿ ಪರಿಭಾಷಿಸಿರುವ ಇತರ ಎಲ್ಲಾ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

3. 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಾಹಿತಿಯನ್ನು ಪಡೆಯುವುದಕ್ಕಾಗಿ ಸಲ್ಲಿಸಿದ ಕೋರಿಕೆ ಜೊತೆಗೆ ಸೂಕ್ತ ರಸೀದಿ ಪಡೆದು ಹತ್ತು ರೂಪಾಯಿಗಳ ಅರ್ಜಿ ಶುಲ್ಕವನ್ನು ನಗದು ರೂಪದಲ್ಲಿ ಅಥವಾ ಸಾರ್ವಜನಿಕ ಪ್ರಾಧಿಕಾರದ ಲೆಕ್ಕಾಧಿಕಾರಿಗೆ ಸಂದಾಯವಾಗಬೇಕಾದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಬ್ಯಾಂಕರ್ಸ್ ಚೆಕ್ ಅನ್ನು ಲಗತ್ತಿಸಿರತಕ್ಕದ್ದು.

4. 7ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿ ಸೂಕ್ತ ರಸೀದಿ ನೀಡುವುದರ ಮೂಲಕ ನಗದು ರೂಪದಲ್ಲಿ ಅಥವಾ ಸಾರ್ವಜನಿಕ ಪ್ರಾಧಿಕಾರದ ಲೆಕ್ಕಾಧಿಕಾರಿಗೆ ಸಂದಾಯವಾಗಬೇಕಾದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಬ್ಯಾಂಕರ್ಸ್ ಚೆಕ್ ಮೂಲಕ ಈ ಕೆಳಕಂಡ ದರಗಳಲ್ಲಿ ಶುಲ್ಕವನ್ನು ವಿಧಿಸತಕ್ಕದ್ದು:–

(ಎ) ಸೃಷ್ಟಿಸಿದ ಅಥವಾ ಪ್ರತಿ ಮಾಡಿದ (ಎ–4 ಅಥವಾ ಎ–3 ಅಳತೆಯ ಹಾಳೆಯಲ್ಲಿ) ಪ್ರತಿ ಪುಟಕ್ಕೆ ಎರಡು ರೂಪಾಯಿಗಳು;

(ಬಿ) ದೊಡ್ಡ ಅಳತೆಯ ಹಾಳೆಯಲ್ಲಿನ ಒಂದು ಪ್ರತಿಯ ವಾಸ್ತವಿಕ ವೆಚ್ಚ ಅಥವಾ ಮೂಲ ಬೆಲೆ;

(ಸಿ) ಮಾದರಿಗಳು ಅಥವಾ ಪ್ರತಿಕೃತಿಗಳಿಗಾಗಿನ ವಾಸ್ತವಿಕ ಖರ್ಚು ಅಥವಾ ಬೆಲೆ; ಮತ್ತು

[1][(ಡಿ) ದಾಖಲೆಗಳ ಪರಿಶೀಲನೆಗಾಗಿ, ಮೊದಲ ತಾಸಿಗೆ ಶುಲ್ಕವಿರುವುದಿಲ್ಲ; ಮತ್ತು ತರುವಾಯದ ಪ್ರತಿ ತಾಸಿಗೆ (ಅಥವಾ ಅದರ ಭಾಗಕ್ಕೆ) ಐದು ರೂಪಾಯಿಗಳ ಶುಲ್ಕ]1

1. ಅಧಿಸೂಚನೆ ಸಂ. ಎಫ್ ಸಂ. 34012 / 8ಸಿಎಸ್/2005–ಇಎಸ್‌ಟಿ (ಬಿ), ದಿನಾಂಕ 27.10.2005ರ ಮೂಲಕ ಪ್ರತಿನಿಯೋಜಿಸಲಾಗಿದೆ.

5. 7ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿ, ಸೂಕ್ತ ರಸೀದಿ ನೀಡುವುದರ ಮೂಲಕ ನಗದು ರೂಪದಲ್ಲಿ ಅಥವಾ ಸಾರ್ವಜನಿಕ ಪ್ರಾಧಿಕಾರದ ಲೆಕ್ಕಾಧಿಕಾರಿಗೆ ಸಂದಾಯ ಮಾಡಬೇಕಾದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಬ್ಯಾಂಕರ್ಸ್ ಚೆಕ್ ಮೂಲಕ ಈ ಕೆಳಕಂಡ ದರಗಳಲ್ಲಿ ಶುಲ್ಕವನ್ನು ವಿಧಿಸತಕ್ಕದ್ದು:–

(ಎ) ಡಿಸ್ಕ್ ಅಥವಾ ಫ್ಲಾಪಿಯಲ್ಲಿ ಒದಗಿಸಿದ ಮಾಹಿತಿಗಾಗಿ ಪ್ರತಿ ಡಿಸ್ಕ್ ಅಥವಾ ಫ್ಲಾಪಿಗೆ ಐವತ್ತು ರೂಪಾಯಿಗಳು; ಮತ್ತು

(ಬಿ) ಮುದ್ರಿತ ನಮೂನೆಯಲ್ಲಿ ಒದಗಿಸಿದ ಮಾಹಿತಿಗಾಗಿ ಅಂಥ ಮುದ್ರಣಕ್ಕಾಗಿ ನಿಗದಿಪಡಿಸಿದ ಬೆಲೆಯಲ್ಲಿ ಅಥವಾ ಮುದ್ರಣದ ಉದ್ಧೃತಭಾಗಕ್ಕೆ ಫೋಟೋ ಪ್ರತಿಯ ಪ್ರತಿ ಪುಟಕ್ಕೆ ಎರಡು ರೂಪಾಯಿಗಳು.